ಬೆಂಗಳೂರು ಮಹಾ ನಗರ ಪಾಲಿಕೆ ಬಗ್ಗೆ ಏನು ಪರಿಸ್ಥಿತಿ ಇದೆ, ದಯವಿಟ್ಟು ಈ ಸಭೆಗೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಸುರೇಶ್ ಕುಮಾರವರು ಬರೆದು ಕಳುಹಿಸಿದ್ದಾರೆ. ಸ್ಟೇಟ್‌ಮೆಂಟ್ಸ್ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮೇಯರ್‌ರವರು ರಾಜೀನಾಮೆ ಕೊಟ್ಟಿದ್ದಾರೆಂದು ಸುದ್ದಿ ಅಷ್ಟೇ ನನಗೆ ಏನೂ ಪಕ್ಕಾ ವರ್ತಮಾನ ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮುಖ್ಯಮಂತ್ರಿಗಳ ಕಛೇರಿಗೆ ಕಳುಹಿಸಿರುವ ರಾಜೀನಾಮೆ ಪ್ರತಿ ಇಲ್ಲಿದೆ. ಎಲ್ಲರಿಗೂ ಕೂಡ ಇವತ್ತು ಇದು ವಿತರಣೆ ಆಗಿದೆ. ಯಾವ ಕಾರಣಕ್ಕೋಸ್ಕರ ನಾನು ರಾಜೀನಾಮೆ ಕೊಡುತ್ತಿದ್ದೇನೆ ಎಂದು ತಿಳಿಸಿದ್ದಾರೆ ಬಹಳ ವಿವರವಾಗಿ ಬೆಂಗಳೂರು ನಗರ ಪಾಲಿಕೆ ಆಯುಕ್ತರ ಮೇಲೆ 14 ಚಾರ್ಜ್ ಶೀಟನ್ನು ಕೊಟ್ಟಂತೆ ಕೊಟ್ಟು ಬಿಟ್ಟಿದ್ದಾರೆ. ರಾಜೀನಾಮೆಯನ್ನು ಕೊಟ್ಟಿದ್ದಾರೆ. ಕಾರ್ಯಕ್ರಮ ಕೂಡ ರದ್ದಾಗಿದೆ, ಸುಮಾರು 2½ ಸಾವಿರ ರೂಪಾಯಿ ಜಾಹಿರಾತು ಕೊಟ್ಟು ಸಿಟಿ ಮಾರ್ಕೆಟ್‌ನ ಉದ್ಘಾಟನೆಯೂ ಕೂಡ ನಿಂತಿದೆ.

ಶ್ರೀ ಜೆ.ಹೆಚ್. ಪಟೇಲ್ : ನನಗೆ ಮಾಹಿತಿ ಇಲ್ಲ. ನನಗೆ ಯಾವುದೂ ಪತ್ರ ಬಂದಿಲ್ಲ. ಮಾನ್ಯ ಸದಸ್ಯರಿಗೆ ಪತ್ರ ಬಂದಿದ್ದರೆ ಆ ಕಾರಣಗಳು ಇದ್ದರೆ ಕಳುಹಿಸಿ ಕೊಡಲಿ. I will examine it.

ಶ್ರೀ ವಾಟಾಳ್ ನಾಗರಾಜ್ : ಸಮಾರಂಭ ರದ್ದಾಯಿತು ಮಾನ್ಯ ಮುಖ್ಯಮಂತ್ರಿಗಳು ಸಮಾರಂಭಕ್ಕೆ ಹೋಗಬೇಕಾಗಿತ್ತು.

ಅಧ್ಯಕ್ಷರು : ಅವರ ಆರೋಗ್ಯ ಸುಧಾರಿಸಿದ ಮೇಲೆ ಸರಿಯಾಗಿ ಉತ್ತರ ಹೇಳುತ್ತಾರೆ. ತಾವು ನಿಯಮ 69ರ ಮೇಲೆ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಆರಗ ಜ್ಞಾನೇಂದ್ರ : ಜಾಹಿರಾತು ಹಾಕಿಸಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿದ್ದಾರೆ. ಆದರೆ ಆ ಸಮಾರಂಭವನ್ನು ರದ್ದು ಮಾಡಿದ್ದು ಏತಕ್ಕೆ ಎಂಬುದನ್ನು ಹೇಳಿ.

ಅಧ್ಯಕ್ಷರು : ತೀರ್ಥಹಳ್ಳಿಯಿಂದ ನೀವು ಸೀದಾ ಬೆಂಗಳೂರಿಗೆ ಬಂದು ಬಿಟ್ಟಿರಲ್ಲರಿ? ಈ ಊರು ಒಳ್ಳೆಯದಲ್ಲಪ್ಪಾ ನೀವು ನಿಮ್ಮ ಊರಲ್ಲಿ ಇರಿ.

ಶ್ರೀ ಆರಗ ಜ್ಞಾನೇಂದ್ರ : ಇದು ರಾಜ್ಯದ ಕೇಂದ್ರವಾಗಿರುವುದರಿಂದ ಇಲ್ಲಿ ಆಗುವ ಪರಿಣಾಮ ಹಳ್ಳಿಗಳ ಮೇಲೂ ಆಗುತ್ತದೆ.

ಚಿಂತಾಮಣಿಯಲ್ಲಿ ನಡೆದ ಗೋಲಿಬಾರ್

ಶ್ರೀ ವಾಟಾಳ್ ನಾಗರಾಜ್ : ಚಿಂತಾಮಣಿಯಲ್ಲಿ ಗೋಲೀಬಾರ್ ನಡೆದಿದೆ. ಪೋಲೀಸ್‌ನವರು ಸತ್ತಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೆ ಏನು ಮಾಹಿತಿ ಬಂದಿದೆ? ಹೇಳಿಕೆಯನ್ನು ಸರ್ಕಾರ ಕೊಡಬೇಕು. ಇದು ಬಹಳ ಪ್ರಾಮುಖ್ಯವಾದದ್ದು.

ಶ್ರೀ ಜೆ.ಹೆಚ್. ಪಟೇಲ್ : ವಿವರವಾದ ಹೇಳಿಕೆಯನ್ನು ತರುವುದಕ್ಕೆ ಕಳುಹಿಸಿದ್ದೇನೆ. ಬಂದ ನಂತರ ಕೊಡುತ್ತೇನೆ.

ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ವಿತರಣೆಯಲ್ಲಿ ತಾರತಮ್ಯ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ ಇವತ್ತಿನ ದಿವಸ, ಪ್ರೊಫೆಷನಲ್ ಕೋರ್ಸ್‌ಗಳ ವಿಷಯದಲ್ಲಿ ಒಂದು ದೊಡ್ಡ ಗೊಂದಲ ಬಂದಿದೆ. ಸೀಟು ಹಂಚಿಕೆ ವಿಷಯದಲ್ಲಿ ನಿಗದಿತವಾದಂಥ ಅಥವಾ ಕಟ್ಟುನಿಟ್ಟಾದ ಕಾನೂನು ನಮ್ಮ ರಾಜ್ಯದಲ್ಲಿ ಇಲ್ಲದೇ ಇರುವ ಕಾರಣ ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್ ಹಾಗೂ ಮತ್ತಿತರ ಪ್ರೊಫೆಷನಲ್ ಸೀಟುಗಳ ಹಂಚಿಕೆಯಲ್ಲಿ ಸ್ಥಿರತೆ ಇಲ್ಲ ಮತ್ತು ಯಾವ ಪ್ರಕಾರ ಹೋಗಬೇಕೆನ್ನುವ ಬಗ್ಗೆ ಮಾರ್ಗದರ್ಶನ ಇಲ್ಲದಂತಾಗಿದೆ. ಮೊದಲಿನಿಂದಲೂ ಎಕ್ಸಿಕ್ಯುಟಿವ್ ಆರ್ಡರ್‌ನ್ನು ಇಶ್ಯೂ ಮಾಡಿಕೊಂಡು ಅದರ ಮೇಲೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೀಟುಗಳನ್ನು ನಿಗದಿ ಮಾಡತಕ್ಕಂಥಾದ್ದು ಮತ್ತು ಅದನ್ನು ಮೆಡಿಕಲ್ ಕೌನ್ಸಿಲ್‌ನವರು ಒಪ್ಪಿಕೊಳ್ಳತಕ್ಕಂಥಾದ್ದು ನಡೆದುಕೊಂಡು ಬರುತ್ತಿತ್ತು. ಪ್ರತಿ ಸಲವೂ ಗೌರ್ನಮೆಂಟ್ ಆರ್ಡರ್ ವಿರುದ್ಧ ಹೈಕೋರ್ಟ್‌ನಲ್ಲಿ ಅಥವಾ ಸುಪ್ರೀಮ್ ಕೋರ್ಟ್‌ನಲ್ಲಿ ಕೇಸ್ ಹಾಕಿ ತಡೆ ತರತಕ್ಕಂಥಾದ್ದು ನಡೆಯುತ್ತಲೇ ಇದೆ. ಸರ್ಕಾರವೇ ಕೊಟ್ಟಿರುವ ಅಂಕಿ ಅಂಶದ ಪ್ರಕಾರ ರಾಜ್ಯದಲ್ಲಿರುವ ಎಲ್ಲಾ ಮೆಡಿಕಲ್ ಕಾಲೇಜುಗಳಿಗೆ ಒಟ್ಟು 2575 ಸೀಟುಗಳನ್ನು ನಿಗದಿ ಮಾಡಿ ಅದರ ಪ್ರಕಾರ ವಿದ್ಯಾರ್ಥಿಗಳಿಗೆ ಇಂಟರ್‌ವ್ಯೂ ಮಾಡಿ ಸೀಟುಗಳನ್ನು ಅಲಾಟ್ ಮಾಡಲಾಗಿದೆ. ಆದರೆ, ಇದರ ಬಗ್ಗೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಸುಪ್ರೀಮ್ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ನಾವು ನಿಗದಿ ಮಾಡಿರುವುದು 1962 ಸೀಟುಗಳನ್ನು ಮಾತ್ರ, ಆದರೆ, ಅದರ ಬದಲಾಗಿ 2575 ಸೀಟುಗಳನ್ನು ಹಂಚಿಕೆ ಮಾಡಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಇದರ ಪ್ರಕಾರ ಸರ್ಕಾರ ಅಲಾಟ್ ಮಾಡಿರುವ ಸೀಟಿಗೂ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಫಿಕ್ಸ್ ಮಾಡಿರುವ ಸೀಟಿಗೂ 613 ಸೀಟುಗಳು ವ್ಯತ್ಯಾಸ ಬರುತ್ತದೆ. ಅಂದರೆ, ಈಗಾಗಲೇ ಇಂಟರ್‌ವ್ಯೂನಲ್ಲಿ ಭಾಗವಹಿಸಿ ಸೆಲೆಕ್ಟ್ ಆಗಿರುವ 613 ವಿದ್ಯಾರ್ಥಿಗಳಿಗೆ ಸೀಟು ಸಿಗುವುದಿಲ್ಲ ಎಂದಾಯಿತು. ಈ ರೀತಿ ಸೆಲೆಕ್ಟ್ ಆಗಿರುವ 613 ಜನ ವಿದ್ಯಾರ್ಥಿಗಳು, ನಾವು ಮೆಡಿಕಲ್ ಸೀಟಿಗೆ ಸೆಲೆಕ್ಟ್ ಆಗಿರುವುದರಿಂದ ವೆಟರ್‌ನರಿ ಅಥವಾ ಅಗ್ರಿಕಲ್ಚರ್ ಕೋರ್ಸ್‌ಗಳಿಗೆ ಹೋಗುವುದ ಬೇಡವೆಂದು ಅವರು ಅಲ್ಲೂ ಅಟೆಂಡ್ ಮಾಡಿಲ್ಲ. ಹಾಗೂ ಮೆಡಿಕಲ್ ಸೀಟು ಸಿಕ್ಕಿರುವಂಥವರು ಇಂಜಿನಿಯರಿಂಗ್ ಸೀಟುಗಳಿಗೂ ಕನ್‌ಸೆಂಟನ್ನು ಕೊಟ್ಟಿಲ್ಲ. ಇವತ್ತು ಈ ರೀತಿ ಆಗಿರುವುದರಿಂದ ಮಕ್ಕಳನ್ನು ಕೊಲೆ ಮಾಡಿದ ಹಾಗೆ ಆಗಿದೆ. ಮಕ್ಕಳನ್ನು ಪ್ರೋತ್ಸಾಹದಿಂದ ಬೆಳೆಸುವುದನ್ನು ಬಿಟ್ಟು ಅದರ ಬೆಳವಣಿಗೆಗೆ ಅಡ್ಡಿ ಬರುವುದಾದರೆ ಇದರ ಬಗ್ಗೆ ಖಂಡಿತವಾಗಿ ಸರ್ಕಾರದ ಲಕ್ಷ್ಯ ಇಲ್ಲವೆಂದು ನಾನು ಹೇಳಬೇಕಾಗುತ್ತದೆ. ಹಿಂದಿನಿಂದಲೂ ಇದೇ ರೀತಿ ನಡೆದುಕೊಂಡು ಬರುತ್ತಿರುವುದು ಸರ್ಕಾರಕ್ಕೆ ಗೊತ್ತಿದೆ. ನಮ್ಮ ಸರ್ಕಾರ ಇದ್ದಾಗಲೂ